ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ
–ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)
ಸಂಪಾದಕರು:ಸಿದ್ರಾಮಯ್ಯ ಸ್ವಾಮಿ
EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com | ಇ–ಪೇಪರ್bidarvani.online | bidarvani | bidarvani@gmail.com | Whatsapp | Contact:9148471077

KARKAN/77693/2019 ಸಂಪುಟ:08 ಸಂಚಿಕೆ:187 ದಿನಾಂಕ:24.10.2025 ಶುಕ್ರವಾರ ಪುಟ.4 ಬೆಲೆ:02 ರೂ ಮೊ.9945793175

# ಬೀರಲಿಂಗೇಶ್ವರ ದೇವರ ಜಾತ್ರೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮ ಭಾಗಿ



ಹುಮನಾಬಾದ್:ಅ.23: ಪ್ರಸ್ತುತ ದಿನಗಳಲ್ಲಿ ಪರಿಸರ ಸಂರಕ್ಷಣೆ ಮಾಡಬೇಕಾದರೆ ಪ್ರತಿಯೊಬ್ಬರೂ ವೈಜ್ಞಾನಿಕ ಚಿಂತನೆಗಳನ್ನು ಮಾಡಬೇಕು ಎಂದು ಬಸವಕಲ್ಯಾಣ ತಾಲೂಕಿನ ತಡೋಳಾ ಆಶ್ರಮದ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ತಾಲೂಕಿನ ಕುಮಾರ ಚಿಂಚೋಳಿ ಗ್ರಾಮದಲ್ಲಿ ಆಯೋಜಿಸಿದ್ದ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ದೀಪೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸಮಾಜದಲ್ಲಿ ಆರೋಗ್ಯಯುತವಾಗಿ ಜೀವನ ನಡೆಸಬೇಕಾಗಿದ್ದ ಮನುಷ್ಯರು ಕಲುಷಿತ ಆಹಾರ ಸೇವನೆ ಮಾಡುವ ಮೂಲಕ ತಮ್ಮ ಜೀವನವನ್ನೇ ನಾಶ ಮಾಡಿಕೊಳ್ಳುತ್ತಿದ್ದಾನೆ. ಹೀಗಾಗಿ ಇಂದಿನ ಮನುಷ್ಯರು ಶ್ರಮ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಪರಿಸರ ರಕ್ಷಣೆ ಹಾಗೂ ಉತ್ತಮ ಆಹಾರ ಸೇವನೆ ಮಾಡಿದರೆ ಮಾತ್ರ ಆರೋಗ್ಯಯುತ ಜೀವನ ಕಳೆಯಲು ಸಾಧ್ಯವಾಗುತ್ತದೆ ಎಂದರು.

ಐತಿಹಾಸಿಕ ಬೀರಲಿಂಗೇಶ್ವರ ಜಾತ್ರಾ ಮಹೋತ್ಸವದಲ್ಲಿ ವಿಶೇಷವಾಗಿ ದೀಪೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿರುವ ಶ್ರೇಯಸ್ಸು ದಿ. ಬಸಯ್ಯ ಸ್ವಾಮಿ ಅವರಿಗೆ ಸಲ್ಲುತ್ತದೆ. ಈ ಧಾರ್ಮಿಕ ಕಾರ್ಯಕ್ರಮ ಈದೀಗ ಅವರ ಮಗನಾದ ಎ.ಬಿ. ಸ್ವಾಮಿ ಮುಂದುವರೆಸುವ ಮೂಲಕ ಗ್ರಾಮದಲ್ಲಿ ಸಾಮರಸ್ಯ ಒಡಮೂಡಿಸುತ್ತಿರುವುದು ಶ್ಲಾಘನಿಯ ಕಾರ್ಯವಾಗಿದೆ ಎಂದರು.ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು ಕೋ ಕೋ ಜಿಲ್ಲಾ ಮಟ್ಟಕ್ಕೆ ಆಯ್ಕೆಗೊಂಡಿದ್ದಕ್ಕೆ ಅವರಿಗೆ ಎ ಬಿ ಸ್ವಾಮಿಯವರು ಸನ್ಮಾನಿಸಿ ನೆನಪಿನ ಕಾಣಿಕೆ ನೀಡಿದರು.ಈ ಸಂದರ್ಭದಲ್ಲಿ ಅನೀಲಕುಮಾರ ಎಸ್ ಘನ ಚಕ್ಕೆ ಅಧ್ಯಕ್ಷರು ,ವಿ.ಬಿ.ಸ್ವಾಮಿ ಉಪಾಧ್ಯಕ್ಷರು, ಉಸ್ಮಾನ್‌ಖಾನ್ ಜವಾದಾರ್,ಮಾಳಪ್ಪಾ ಗುರುಗಳು, ನಾಗಪ್ಪಾ ಮೇತ್ರೆ, ಪೀರಪ್ಪಾ ಮೂಲಗೆ,ಉಮೇಶ ವರವಟ್ಟಿ, ಪ್ರಭು ವರವಟ್ಟಿ ವೈಜಿನಾಥ ಉತ್ತರಗೆ, ಬೀರಪ್ಪಾ ರಂಜೇರಿ, ವೈಜಿನಾಥ ನಿಡೋದೆ, ಜಗನ್ನಾಥ ಮದಕಟ್ಟೆ, ರೇವಣಪ್ಪಾ ಶೇರಿಕಾರ, ರಘುನಾಥ ಘನಚಕ್ಕೆ, ಬೀರಪ್ಪಾ ಘನಚಕ್ಕೆ, ಕಾಶಿನಾಥ ಹುಣಜೆ, ಜೈಕುಮಾರ ಗೌರ, ಕಂಟೆಪ್ಪಾ ಮಾದಗೊಂಡ ,ಸೇರಿದಂತೆ ಅನೇಕರು ಇದ್ದರು.

# ಟಿಇಟಿ ಉಚಿತ ಕಾರ್ಯಾಗಾರ 26 ರಂದು

ಬೀದರ್.ಅ.23:ಸ್ಪರ್ಧಾ ಸಂಕಲ್ಪ ಅಕಾಡೆಮಿ ವತಿಯಿಂದ ನಗರದ ಜನವಾಡ ರಸ್ತೆಯ ವಾಟರ್ ಟ್ಯಾಂಕ್ ಹಿಂದುಗಡೆಯ ಗೋವಿಂದ ಲೇಔಟ್‌ನಲ್ಲಿ ಇರುವ ಅಕಾಡೆಮಿಯ ಸಭಾಂಗಣದಲ್ಲಿ ಅ.26 ರಂದು ಬೆಳಿಗ್ಗೆ 10ಕ್ಕೆ ಟಿಇಟಿ ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಧಾರವಾಡದ ನುರಿತ ಉಪನ್ಯಾಸಕ ಯಲ್ಲಪ್ಪ ಕಮದಾಳ ಮನೋ ವಿಜ್ಞಾನ ಕುರಿತು ಹಾಗೂ ಶರಣಗೌಡ ಚಿಕ್ಕನಗೌಡ ಅವರು ಕನ್ನಡ ಕುರಿತು ಉಪನ್ಯಾಸ ನೀಡಲಿದ್ದಾರೆ. ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ) ಬರೆಯಲಿರುವ ಜಿಲ್ಲೆಯ ಅಭ್ಯರ್ಥಿಗಳಿಗೆ ನೆರವಾಗಲು ಕಾರ್ಯಾಗಾರ ಸಂಘಟಿಸಲಾಗಿದೆ. ಅಭ್ಯರ್ಥಿಗಳು ಇದರ ಪ್ರಯೋಜನ ಪಡೆಯಬೇಕು ಎಂದು ಅಕಾಡೆಮಿಯ ನಿರ್ದೇಶಕ ನಾಗೇಶ್ ಸ್ವಾಮಿ ಮಸ್ಕಲ್ ಕೋರಿದ್ದಾರೆ. ಮಾಹಿತಿಗೆ ಮೊಬೈಲ್ ಸಂಖ್ಯೆ 7259525145ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಹೊನ್ನಿಕೇರಿಯಲ್ಲಿ ಶ್ರದ್ಧೆ, ಭಕ್ತಿಯ ದೀಪೋತ್ಸವ

ಬೀದರ್.ಅ.23:ದೀಪಾವಳಿ ಪಾಡ್ಯದ ನಿಮಿತ್ತ ತಾಲ್ಲೂಕಿನ ಹೊನ್ನಿಕೇರಿ ಗ್ರಾಮದ ಸಿದ್ಧೇಶ್ವರ ದೇವಸ್ಥಾನದಲ್ಲಿ ಬುಧವಾರ ಶ್ರದ್ಧೆ, ಭಕ್ತಿಯಿಂದ ದೀಪೋತ್ಸವ ನಡೆಯಿತು.

ಭಕ್ತರು ದೇವಸ್ಥಾನದ ಹಳೆಯ ಪೀಠಾಧಿಕಾರಿ ಮನೆಯಿಂದ ದೇವಸ್ಥಾನಕ್ಕೆ ಆಗಮಿಸಿ, ಪುಷ್ಕರಣಿ, ಲಿಂಗ ಮಂದಿರ, ಮಾಲಗಂಬ, ಪ್ರತಿ ಮೆಟ್ಟಿಲುಗಳ ಮೇಲೆ ಹಣತೆ ಇಟ್ಟು, ಅದರಲ್ಲಿ ಎಣ್ಣೆ ಹಾಕಿ ದೀಪ ಬೆಳಗಿಸಿದರು.

ಸಿದ್ಧೇಶ್ವರ ಹಾಗೂ ಮಲ್ಲಿಕಾರ್ಜುನ ದೇವರಿಗೆ ಪೂಜೆ ಸಲ್ಲಿಸಿ, ನೈವೇದ್ಯ ಸಮರ್ಪಿಸಿದರು.

ಪ್ರತಿ ವರ್ಷ ದೀಪಾವಳಿ ಪಾಡ್ಯದ ಅಂಗವಾಗಿ ದೀಪೋತ್ಸವ ನಡೆಸಿಕೊಂಡು ಬರಲಾಗುತ್ತಿದೆ. ದೇವಸ್ಥಾನದ ಪೀಠಾಧಿಕಾರಿಯಾಗಿದ್ದ ಸಿದ್ಧಲಿಂಗಯ್ಯ ಸ್ವಾಮಿ ಪೂಜಾರಿ ಅವರ ನಿಧನದ ನಂತರ ಅವರ ಕಿರಿಯ ಪುತ್ರ ನಾಗಯ್ಯ ಸ್ವಾಮಿ ಪೂಜಾರಿ ಅವರು ದೀಪೋತ್ಸವ ಮುನ್ನಡೆಸುತ್ತಿದ್ದಾರೆ ಎಂದು ಪ್ರಶಾಂತಯ್ಯ ಸ್ವಾಮಿ ಪೂಜಾರಿ ತಿಳಿಸಿದರು.

ಪ್ರಧಾನ ಅರ್ಚಕ ಸಿದ್ಧಯ್ಯ ಸ್ವಾಮಿ, ಪ್ರಮುಖರಾದ ಗದಗಯ್ಯ ಸ್ವಾಮಿ, ಬಾಬಯ್ಯ, ರಾಜಕುಮಾರ, ಲಿಂಗರಾಜ, ಬಸವಕುಮಾರ, ಗುರುಶಾಂತಯ್ಯ, ಶ್ರೀಕಾಂತಯ್ಯ, ವಿಶ್ವನಾಥ, ಆಕಾಶ್ ಮತ್ತಿತರರು ದೀಪೋತ್ಸವದಲ್ಲಿ ಪಾಲ್ಗೊಂಡಿದ್ದರು.



# ವಚನ ಸಂರಕ್ಷಣೆಯಲ್ಲಿ ಚನ್ನಬಸವಣ್ಣನವರ ಪಾತ್ರ ಪ್ರಮುಖ



ಕಲಬುರಗಿ:ಅ.23:ವಿಶ್ವಗುರು ಬಸವಣ್ಣನವರ ನೇತೃತ್ವದಲ್ಲಿ ಹನ್ನೆರಡನೇ ಶತಮಾನದಲ್ಲಿ ಜರುಗಿದ ಸಾಮಾಜಿಕ ಚಳುವಳಿಯಲ್ಲಿ ಚನ್ನಬಸವಣ್ಣನವರು ಸಾಕಷ್ಟು ಶ್ರಮಿಸಿದ್ದಾರೆ. ಅಮೂಲ್ಯವಾದ ವಚನಗಳನ್ನು ರಚಿಸಿ, ರಕ್ಷಿಸಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಅವಿರಳ ಜ್ಞಾನಿಯಾಗಿದ್ದ ಅವರ ಕೊಡುಗೆ ಅನನ್ಯವಾಗಿದೆ. ಅವರು ಪ್ರಮುಖ ವಚನಕಾರರಾಗಿದ್ದು, ಶರಣರ ಕ್ರಾಂತಿಯ ನಂತರ ವಚನಗಳನ್ನು ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಉಪನ್ಯಾಸಕ, ಶರಣ ಚಿಂತಕ ಎಚ್.ಬಿ. ಪಾಟೀಲ ಅಭಿಪ್ರಾಯಪಟ್ಟರು.

ನಗರದ ಆಳಂದ ರಸ್ತೆಯ ದೇವಿ ನಗರ ಕಮಾನ್ ಹತ್ತಿರದ 'ಬಿರಾದಾರ ಕಾಂಪ್ಲೆಕ್ಸ್'ನ ಆವರಣದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ಐತಿಹಾಸಿಕ, ಸಾರ್ವಕಾಲಿಕ ದಾಖಲೆಯ 5900ನೇ ಕಾರ್ಯಕ್ರಮವಾದ ಬುಧವಾರ ಜರುಗಿದ 'ಅವಿರಳ ಜ್ಞಾನಿ ಶರಣ ಚನ್ನಬಸವಣ್ಣನವರ 853ನೇ ಜಯಂತಿ'ಯ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಅವಿರಳ ಜ್ಞಾನಿ, ಚಿನ್ಮಯಜ್ಞಾನಿ, ಷಟಸ್ಥಲ ಚಕ್ರವರ್ತಿ, ಚಿಕ್ಕದಣ್ಣಾಯಕ, ವಿಶ್ವಗುರು ಬಸವಣ್ಣನವರ ಸೋದರ ಅಳಿಯರಾದ ಅವರು, ಶರಣರ ಸಾಮಾಜಿಕ ಚಳುವಳಿಗೆ ಪ್ರಮುಖವಾದ ಕೊಡುಗೆಯನ್ನು ನೀಡಿದ್ದಾರೆ. ಕಲ್ಯಾಣ ಕ್ರಾಂತಿಯ ನಂತರ ವಚನಗಳನ್ನು ಉಳಿಸಿ ಉಳವಿಗೆ ಸಾಗಿಸುವ ಜವಾಬ್ದಾರಿಯನ್ನು

ನಿರ್ವಹಿಸಿದರು. ಅನುಭವ ಮಂಟಪದ ಸದಸ್ಯರಿಗೆ ಅಕ್ಕಮಹಾದೇವಿಯವರನ್ನು ಪರಿಚಯಿಸಿದರು. ಚನ್ನಬಸವಣ್ಣನವರು 'ಕೂಡಲಚೆನ್ನಸಂಗಮದೇವ' ಎಂಬ ಅಂಕಿತನಾಮದೊಂದಿಗೆ ರಚಿಸಿದ ಒಟ್ಟು 1776 ವಚನಗಳು ಲಭ್ಯವಾಗಿವೆ. ಷಟಸ್ಥಲ ಸಿದ್ಧಾಂತಕ್ಕೆ ಅಡಿಪಾಯ ಹಾಕಿದ್ದು ಅವರು ಪ್ರಮುಖ ಕೊಡುಗೆಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಮುಖರಾದ ಶಿವಯೋಗೆಪ್ಪಾ ಎಸ್.ಬಿರಾದಾರ, ಡಾ.ರಾಜಶೇಖರ ಪಾಟೀಲ್, ಮಲ್ಲಿನಾಥ ದಂಗಾಪುರ, ರೇವಣಸಿದ್ದಪ್ಪ ಪವಾಡಶೆಟ್ಟಿ, ಹಣಮಂತರವಾವ ಭೈರಾಮಡಗಿ, ಮಲ್ಲಿನಾಥ ದೇಗಾಂವ, ಅಜಯ ಎಸ್.ಬಿರಾದಾರ, ವಿಜಯ ಎಸ್.ಬಿರಾದಾರ, ಚಂದ್ರಕಾಂತ ನರೋಣಿ, ಸಂತೋಷಕುಮಾರ ಮಾಲಿ ಪಾಟೀಲ್ ಸೇರಿದಂತೆ ಇನ್ನಿತರರಿದ್ದರು.

## ಬಸವ ಸಂಸ್ಕೃತಿ ಅಭಿಯಾನದ ಶ್ರೀಗಳ ಕುರಿತು ಹಗುರವಾಗಿ ಮಾತನಾಡಿದ ಕನ್ಹೇರಿ ಶ್ರೀಗಳು

# ಕನ್ಹೇರಿ ಶ್ರೀಗಳಿಗೆ ಸರ್ಕಾರ ಕೂಡಲೇ ಬಂಧಿಸಬೇಕು:ಕಿರಣ ಖಂಡ್ರೆ

ಬೀದರ.ಅ.23:ಬಸವ ಸಂಸ್ಕೃತಿ ಅಭಿಯಾನದ ಪೂಜ್ಯರಿಗೆ ಕಾಡಸಿದ್ದೇಶ್ವರ ಮಠದ ಕನ್ಹೇರಿ ಶ್ರೀಗಳು ಬಾಯಿಗೆ ಬಂದಂತೆ ಹಗುರವಾಗಿ ಅವಾಚ್ಯ ಶಬ್ದಗಳಿಂದ ಬೈದಿರುವುದು ತೀವ್ರ ಖಂಡನೀಯ. ಸರ್ಕಾರ ಕೂಡಲೇ ಅವರ ಮೇಲೆ ಸ್ವಯಂಪ್ರೇರಿತವಾಗಿ ಕೇಸ್ ದಾಖಲಿಸಿಕೊಂಡು ಬಂಧಿಸಬೇಕೆಂದು ಜಾಗತಿಕ ಲಿಂಗಾಯತ ಮಹಾಸಭೆಯ ರಾಜ್ಯ ಕಾರ್ಯದರ್ಶಿ ಕಿರಣ ಖಂಡ್ರೆ ಆಗ್ರಹಿಸಿದ್ದಾರೆ.

ಈ ಕುರಿತು ಬುಧವಾರ ನಗರದ ಜಿಲ್ಲಾ ಪತ್ರಿಕಾಭವನದಲ್ಲಿ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಬಸವ ಸಂಸ್ಕೃತಿ ಅಭಿಯಾನ ಮುಖ್ಯಮಂತ್ರಿಗಳ ಕೃಪಾಪೋಷಿತ ಕಾರ್ಯಕ್ರಮ, ಅವರನ್ನು ಮೆಟ್ಟಿನಿಂದ ಹೊಡೆಯಬೇಕು ಎಂದೆಲ್ಲ ಕೆಟ್ಟ ಭಾಷೆಗಳನ್ನು ಬಳಸಿರುವ ಕನ್ಹೇರಿ ಶ್ರೀಗಳಿಗೆ ಸರ್ಕಾರ ಕೂಡಲೇ ಬಂಧಿಸಬೇಕು. ನಮ್ಮದು ಸಿಎಂ ಕೃಪಾಪೋಷಿತ ಅಭಿಯಾನ ಅಲ್ಲ. ಅದು ವಿಶ್ವಗುರು ಬಸವೇಶ್ವರರ ಕೃಪಾಪೋಷಿತ, ಲಿಂಗಾನಂದ ಸ್ವಾಮಿಗಳ ಮತ್ತು ಮಾತೆ ಮಹಾದೇವಿಯವರ ಕೃಪಾಪೋಷಿತ ಅಭಿಯಾನವಾಗಿದೆ ಎಂದು ಕಿರಣ ಖಂಡ್ರೆ ಘಂಟಾಘೋಷವಾಗಿ ತಿಳಿಸಿದರು.

ಮುಂದುವರೆದು ಮಾತನಾಡಿದ ಕಿರಣ ಖಂಡ್ರೆಯವರು ಸ್ವತಃ ನಮ್ಮ ಹಣ ಖರ್ಚು ಅಭಿಯಾನಗಳಲ್ಲಿ ಪಾಲ್ಗೊಂಡಿದ್ದೇವೆ. ಪೂಜ್ಯ ಗದುಗಿನ ಶ್ರೀಗಳು, ಭಾಲ್ಕಿಶ್ರೀಗಳು ಸೇರಿದಂತೆ ಹಲವಾರು ಬಸವ ಭಕ್ತರು, ಪೂಜ್ಯರು ದೇಣಿಗೆ ನೀಡಿದ್ದಾರೆ. ಇದರಲ್ಲಿ ಯಾವುದೇ ರಾಜಕಾರಣಿಗಳ ಹಣ ನಾವು ಬಳಸಿಕೊಂಡಿಲ್ಲ. ಸರ್ಕಾರವೂ ನಮಗೆ ಸಹಾಯ ಮಾಡಿಲ್ಲ. ಕಾರ್ಯಕ್ರಮದ ಬಗ್ಗೆ ಲೆಕ್ಕ ಕೇಳುವ ನಿಮಗೆ ಯಾವ ನೈತಿಕತೆ ಇದೆ ಎಂದರು.

ವಿದೇಶಿ ಧರ್ಮಗಳಿಗೆ ನಮ್ಮ ದೇಶದಲ್ಲಿ ಮಾನ್ಯತೆ ಸಿಗುತ್ತದೆ. ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಮತ್ತು ಸಿಖ್ ಧರ್ಮಗಳು ಸ್ವತಂತ್ರ ಧರ್ಮದ ಮಾನ್ಯತೆ ಪಡೆದುಕೊಂಡಿವೆ. ಆದರೆ ಭಾರತದ ನೆಲದಲ್ಲಿಯೇ ಹುಟ್ಟಿಕೊಂಡ ಸ್ವತಂತ್ರ ಲಿಂಗಾಯತ ದರ್ಮಕ್ಕೆ ಮಾನ್ಯತೆ ಬೇಡ್ವಾ? ಎಂದು ಪ್ರಶ್ನಿಸಿದರು.

ಇದೇ ರೀತಿ ಕನ್ಹೇರಿ ಶ್ರೀಗಳು ಹಗುರವಾಗಿ ಮಾಡನಾಡುತ್ತಿದ್ದರೆ ಎಲ್ಲಾ ಕಡೆ ಅವರ ಮೇಲೆ ಕೇಸ್ ದಾಖಲಿಸುತ್ತೇವೆ. ರಕ್ತ ಹರಿದರೂ ಚಿಂತೆಯಿಲ್ಲ ಧರ್ಮಕ್ಕಾಗಿ ಹಾಗೂ ದೇಶಕ್ಕಾಗಿ ನಿರಂತರವಾಗಿ ಹೋರಾಟ ಮಾಡುತ್ತೇವೆ. ಕನ್ಹೇರಿ ಶ್ರೀಗಳಿಗೆ ದೇವರು ಸದ್ಬುದ್ಧಿ ಕರುಣಿಸಲಿ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನ್ಯಾಯವಾದಿಗಳಾದ ಶ್ರೀಕಾಂತ ಭೊರಾಳೆ, ವಿಶ್ವಗುರು ಬಸವ ಧರ್ಮ ಕೇಂದ್ರದ ಅಧ್ಯಕ್ಷ ಓಂಪ್ರಕಾಶ ರೊಟ್ಟೆ ಉಪಸ್ಥಿತರಿದ್ದರು.



# ಸಮಾಜದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿಪೋಲಿಸ್ ಇಲಾಖೆಯ ಪಾತ್ರ ಪ್ರಮುಖವಾದದ್ದು



ಕಲಬುರಗಿ.ಅ.23:ಸಮಾಜದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೋಲಿಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪಾತ್ರ ಬಹಳಷ್ಟು ಪರಿಣಾಮಕಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಹೇಳಿದರು.ಮಂಗಳವಾರದಂದು ಪೊಲೀಸ್ ಹುತಾತ್ಮರ ಸ್ಮಾರಕ ಡಿ.ಎ.ಆರ್ ಮೈದಾನದಲ್ಲಿ ಕಲಬುರಗಿ ನಗರ ಮತ್ತು ಕಲಬುರಗಿ ಜಿಲ್ಲಾ ಪೊಲೀಸ್ ವತಿಯಿಂದ ಕರ್ತವ್ಯ ಪಾಲನೆಯಲ್ಲಿ ಪ್ರಾಣವನ್ನು ಸಮರ್ಪಿಸಿದ ಪೊಲೀಸ್ ಹುತಾತ್ಮರ ಸ್ಮಾರಕಕ್ಕೆ ಹೂಗುಚ್ಛ ಅರ್ಪಿಸಿ ಮಾತನಾಡಿದರು.

ಪ್ರತಿಯೊಂದು ಸರ್ಕಾರದ ಕೆಲಸ ಪೊಲೀಸ್ ಇಲಾಖೆ, ಜಿಲ್ಲಾಡಳಿತ ಸಮನ್ವಯತೆಯಿಂದ ಕೆಲಸ ಮಾಡುತ್ತೇವೆ ಚುನಾವಣೆಗಳು, ಜಾತ್ರೆಗಳು ಮತ್ತು ಅಗತ್ಯ ಸಂದರ್ಭಗಳಲ್ಲಿ ಸಮಾಜದಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಪೋಲಿಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪಾತ್ರ ಬಹಳಷ್ಟು ಪರಿಣಾಮಕಾರಿಯಾಗಿದೆ ಎಂದು ಅವರು ಹೇಳಿದರು.ಪ್ರಕೃತಿ ವಿಕೋಪಗಳಾದ ಅತಿವೃಷ್ಠಿ ಮತ್ತು ಅನಾವೃಷ್ಠಿಯಂತಹ ಸಂದರ್ಭದಲ್ಲಿ ಪೋಲಿಸ್ ಇಲಾಖೆಯವರು ನೀಡುವ ಸಹಕಾರದಿಂದ ಯಾವುದೆ ಸಮಸ್ಯೆಗಳನ್ನು ಎದುರಿಸಲು ಪೋಲಿಸ್ ಇಲಾಖೆಯ ಸೇವೆ ಸಹಕಾರಿಯಾಗಿದೆ ಎಂದರು.ನಿವೃತ್ತ ಪೊಲೀಸ್ ಅಧಿಕಾರಿಗಳು ತಮ್ಮ ಅಸೋಷಿಯೇಷನ್ ಮೂಲಕ ಬಹಳಷ್ಟು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರಗಳನ್ನು ಆಯೋಜಿಸುವ ಮುಖಾಂತರ ಸಾಮಾಜಿಕ ಸೇವೆಯನ್ನು ಸಲ್ಲಿಸುವ ಮುಖಾಂತರ ಕರ್ತವ್ಯದಲ್ಲಿ ಸೇವೆಯನ್ನು ಸಲ್ಲಿಸುತಿರುವ ಸಂದರ್ಭದಲ್ಲಿ ಹುತಾತ್ಮರ ಪೊಲೀಸ್ ಸಿಬ್ಬಂದಿಗಳಿಗೆ ಗೌರವವನ್ನು ಸಲ್ಲಿಸೋಣ ಎಂದು ತಿಳಿಸಿದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಮಾತನಾಡಿ, ಪ್ರತಿವರ್ಷ ಅಕ್ಟೋಬರ್ 21 ಪೋಲಿಸ್ ಹುತಾತ್ಮರ ದಿನ ಈ ದಿನ ನಮ್ಮ ಇಲಾಖೆಗೆ ಒಂದು ಕಡೆ ದು:ಖದ ದಿನವಾದರೆ ಜೊತೆಗೆ ಹೆಮ್ಮೆಯ ದಿನವು ಆಗಿದೆ ಎಂದರು.

1959 ಅಕ್ಟೋಬರ್ 21 ರಂದು ಭಾರತ ದೇಶದ ಉತ್ತರ ಗಡಿಯ ಲಡಾಕ್‌ನಲ್ಲಿ 10 ಜನ ವೀರ ಭಾರತಿಯ ಪೊಲೀಸರು ತಮಗಿಂತಲೂ ಹೆಚ್ಚು ಸಂಖ್ಯೆಯಲ್ಲಿದ್ದ ಮತ್ತು ಆಧುನಿಕ ಶಾಸ್ತ್ರಾಸ್ತ್ರಗಳನ್ನು ಹೊಂದಿದ್ದ, ಚೀನಾ ದೇಶದ ಸೈನಿಕರೊಂದಿಗೆ ತಮ್ಮ ಪ್ರಾಣವನ್ನು ಪಣವಾಗಿಟ್ಟು ಹೋರಾಡಿ ದೇಶಕ್ಕಾಗಿ ಪ್ರಾಣಾರ್ಪಣೆಯನ್ನು ಮಾಡಿದ್ದಾರೆ. 2024 □ 2025 ನೇ ಸಾಲಿನಲ್ಲಿ ವಿವಿಧ ರಾಜ್ಯ ಮತ್ತು ಕೇಂದ್ರಿಯ ಪೋಲಿಸ್ ಪಡೆಗಳಲ್ಲಿ ಹುತಾತ್ಮರಾದ 191 ಪೋಲಿಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಹೆಸರನ್ನು ಸ್ಮರಿಸುವ ಭಾಗ್ಯ ನನ್ನದಾಗಿದೆ ಎಂದು ಅವರು ಹೇಳಿದರು.

ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಅವರು ಅಧ್ಯಕ್ಷತೆ ವಹಿಸಿದ್ದರು. ಕರ್ತವ್ಯ ನಿರತ ಪೋಲಿಸ್ ಅಧಿಕಾರಿಗಳಿಗೆ ಗೌರವ ಸಲ್ಲಿಸಲು ಪೋಲಿಸ್ ಹುತಾತ್ಮರ ಸ್ಮಾರಕಕ್ಕೆ ಪುಷ್ಪಾರ್ಚನೆ ಮಾಡಿ, ಕವಾಯತು ತಂಡದಿಂದ ಮೂರು ಸುತ್ತು ಗಾಳಿಯಲ್ಲಿ ಗುಂಡುಗಳನ್ನು ಹಾರಿಸಿ ಪೊಲೀಸ್ ಬ್ಯಾಂಡನಿಂದ ರಾಷ್ಟಗೀತೆಯನ್ನು ನೆರವೇರಿಸಿ ಗೌರವ ಸಲ್ಲಿಸಲಾಯಿತು.

ಪೊಲೀಸ್ ಹುತಾತ್ಮರ ದಿನಾಚರಣೆ ಪ್ರಯುಕ್ತ ಎರಡು ನಿಮಿಷಗಳವರೆಗೆ ಮೌನ ಆಚರಣೆ ಮಾಡಲಾಯಿತು.

# ಸಾಧನೆಗೆ ಬಡತನ ಅಡ್ಡಿಯಾಗದು; ಗೆಣ್ಣೂರ

ವಿಜಯಪುರ:ಅ.23: ಸಾಧನೆಗೆ ಬಡತನ, ಕಷ್ಟ ಕಾರ್ಪಣ್ಯಗಳು ಅಡ್ಡಿಯಾಗಲಾರವು,ಸತತ ಓದಿನಿಂದ ಇಚ್ಚಿಸಿದ ಗುರಿಯನ್ನು ನಾವು ತಲುಪಬಹುದು ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹೇಳಿದರು.

ನಗರದ ಟಕ್ಕೆಯಲ್ಲಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (ಬಿಸಿಎಂ)ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದಲ್ಲಿ ಹಿರಿಯ ವಿದ್ಯಾರ್ಥಿಗಳ ಸಹಯೋಗದಿಂದ ಆರನೇ ಹಾಸ್ಟೆಲ್ ಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ತಮ್ಮ ಜೀವನದ ಕೆಲವು ಘಟನೆಗಳನ್ನು ಮೆಲಕು ಹಾಕುತ್ತ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಮಾನವರ ಮಾತನಾಡಿ ಹಾಸ್ಟೆಲ್‌ಗಳು ಕೇವಲ ಅನ್ನವನ್ನು ಮಾತ್ರ ಕೊಡುವುದಿಲ್ಲ, ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ನಿವೃತ್ತ ನಿಲಯಪಾಲಕ ಎಂ.ಎಸ್.ಕಟಬು ಮಾತನಾಡಿ ಜನನಿ ಜನ್ಮಭೂಮಿ ಸ್ವರ್ಗಕಿಂತಲೂ ಮಿಗಿಲು ಎಂಬ ವಿಷಯವನ್ನು ಹೇಳಿದರು.

ಹಲವು ಹಳೆಯ ವಿದ್ಯಾರ್ಥಿಗಳು ತಮ್ಮ ನೆನಪಿನಂಗಳದಲ್ಲಿ ಅಚ್ಚಳಿಯದಂತಿರುವ ಭಾವನೆಗಳ ಬುತ್ತಿಯನ್ನು ತಮ್ಮ ಅನಿಸಿಕೆಗಳ ಮೂಲಕ ತೆರೆದಿಟ್ಟರು. ಒಟ್ಟಾರೆಯಾಗಿ ಈ ವರ್ಷದ ಹಾಸ್ಟೆಲ್ ಹಬ್ಬ ದೀಪಾವಳಿ ಹಬ್ಬದ ಮುನ್ನವೇ ಹಬ್ಬದ ವಾತಾವರಣ ಸೃಷ್ಟಿ ಮಾಡಿ ಸ್ನೇಹಿತರ ಪುನರಮಿಲನಕ್ಕೆ ಸಾಕ್ಷಿಯಾಗಿತ್ತು.

ಈ ಸಂದರ್ಭದಲ್ಲಿ ಲಕ್ಷ್ಮಣ ಸನದಿ, ಶಿಂಧೆ, ಎಸ್.ಎಸ್. ಕಬಾಡೆ, ರವಿಕುಮಾರ ಬಿರಾದಾರ, ನಾಗೇಶ ಅಳ್ಳಿ, ಎಚ್.ಎಲ್.ದೊಡ್ಡಮನಿ, ಸಂತೋಷ ಬಗಲಿ, ಮಹೇಶ ಸಾಲಿಕೇರಿ, ಅವಜಿ, ಗಿರಿಗೌಡರ,ಸಂತೋಷ ಗುದಳಿ,

ಚಂದ್ರು ಗುಳಬಾಳ, ಹುಸನಪ್ಪ, ಸಿದ್ದನಗೌಡ, ಕಾಡೇಶ, ಮನಸೂರ್ ಬೀಳಗಿ, ಶ್ರೀಕಾಂತ ಇಚೂರ್, ಪ್ರವೀಣ್ ಮ್ಯಾಗೇರಿ, ಜೋತೆಪ್ಪ, ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅನೇಕ ಹಿರಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದು, 6ನೇ ಹಾಸ್ಟೆಲ್ ಹಬ್ಬ ಅತ್ಯಂತ ಯಶಸ್ವಿಯಾಗಿ, ಅರ್ಥಪೂರ್ಣವಾಗಿ ನೆರವೇರಲು ಸಹಕರಿಸಿದರು.



# ವಿಶ್ವಕ್ಕೆ ಪರಿಚಯಿಸಿದ ರಾಮಾಯಣ ಮಹಾಕಾವ್ಯ



ವಿಜಯಪುರ:ಅ.23:ವಿಶ್ವಕ್ಕೆ ರಾಮಾಯಣ ಮಹಾಕಾವ್ಯದ ಮೂಲಕ ಭಾರತೀಯ ಸಾಂಸ್ಕೃತಿಕ, ಸಂಸ್ಕಾರ ಮತ್ತು ಮಾನವೀಯ ಮೌಲ್ಯಗಳನ್ನು ತಿಳಿಸಿಕೊಟ್ಟ ಮಹಾಕವಿ ಮಹರ್ಷಿ ವಾಲ್ಮೀಕಿಯವರಾಗಿದ್ದಾರೆ ಎಂದು ಹಿರಿಯ ನ್ಯಾಯವಾದಿ ಕೆ.ಎಫ. ಅಂಕಲಗಿ ಹೇಳಿದರು.

ನಗರದ ವೀರಶೈವ ಲಿಂಗಾಯತ ಸಭಾಭವನದಲ್ಲಿ ಅಖಿಲ ಭಾರತ ಲಿಂಗಾಯತ ಮಹಾಸಭಾ ಜಿಲ್ಲಾ ಏರ್ಪಡಿಸಿದ ಶಿವಾನುಭಗೋಷ್ಠಿಯಲ್ಲಿ ಮಾತನಾಡಿದ ಅವರು ವಾಲ್ಮೀಕಿ ರಚಿಸಿದ ಮಹಾಕಾವ್ಯ ರಾಮಾಯಣದಲ್ಲಿ ಸರ್ವಕಾಲಿಕ ಮೌಲ್ಯಗಳು, ಜನಪರ ನಿಲವುಗಳು, ಪೂರ್ಣಪ್ರಜ್ಞೆ ವಾಸ್ತವತೆಯ ಪ್ರತಿರೂಪ ಮೌಲ್ಯಗಳ ವಿವಿಧ ಸಂಸ್ಕೃತಿಗಳ ಸಮನ್ವಯತೆ ತಿಳುವಳಿಕೆಯ ವಿಶ್ವಕೋಶವಿದೆ. ರಾಮಾಯಣದ ತತ್ವ ಆದರ್ಶಗಳನ್ನು ಅದರಂತೆ ಮೂಲ ಅಂಶಗಳು ಬೆಳಕಿಗೆ ಬರಬೇಕಾಗಿದೆ. ಮೂಲಕಾವ್ಯದ ಪಾತ್ರಗಳ ಮೂಲಕ ಜವಾಬ್ದಾರಿ ಮತ್ತು ಕರ್ತವ್ಯದ ಮಹತ್ವವನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಕಾರ್ಯ ಆಗಬೇಕಾಗಿದೆ ಎಂದರು.

ಮಹಾಸಭೆಯ ಕೋಶಾಧ್ಯಕ್ಷ ಮ.ಗು. ಯಾದವಾಡ ಮಾತನಾಡಿ ಇತಿಹಾಸವನ್ನು ತಿಳಿದುಕೊಂಡು ಸಮಾಜದ ಜನರನ್ನು ಜಾಗೃತಿ ಮಾಡಬೇಕು. ರಾಷ್ಟ್ರೀಯ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಬೆಳೆಯಬೇಕು ಎಂದರು.

ಜಿಲ್ಲಾಧ್ಯಕ್ಷ ವಿ.ಸಿ. ನಾಗಠಾಣ ಮಾತನಾಡುತ್ತ, ಭಾರತದ ಭವ್ಯ ಪರಂಪರೆಯಲ್ಲಿ ರಚಿತವಾದ ಮೂಲ ರಾಮಾಯಣ ಜ್ಞಾನವನ್ನು ಕುರಿತಾಗಿದೆ.

ಮಹರ್ಷಿ ವಾಲ್ಮೀಕಿ ಸಂಸ್ಕೃತವನ್ನು ಕಲಿತು ರಾಮಾಯಣ ರಚಿಸಿದ್ದಾರೆ. ಶ್ರೇಷ್ಠತೆ ಮೌಲ್ಯಗಳನ್ನು ಹೊಂದಿರುವ ರಾಮನ ಜೀವನ ಕುರಿತಾಗಿ ಪರಿಚಯಿಸುವಲ್ಲಿ ಸರ್ವಕಾಲಿಕ ಸಾಮಾಜಿಕ ಮೌಲ್ಯಗಳನ್ನು ಸನ್ಮಾರ್ಗಕ್ಕೆ ಒಯ್ಯುವ ದಾರಿದೀಪವಾಗಿವೆ. 24 ಸಾವಿರ ಶ್ಲೋಕಗಳನ್ನು ಹೊಂದಿದ ಅವೆಲ್ಲವೂ ಮಾನವ ಕುಲದ ಸೈದ್ಧಾಂತಿಕ ವಿಚಾರಧಾರೆಗಳನ್ನು ಜ್ಞಾನದ ಚಿಂತನೆಯನ್ನು ತಿಳಿಸಿಕೊಡುತ್ತದೆ.ಅವುಗಳನ್ನು ಜೀವನದಲ್ಲಿ ನಾವು ಅಳವಡಿಸಿಕೊಳ್ಳಬೇಕಾಗಿದೆ ಎಂದರು.

ಶರಣೆ ಅಕ್ಕಮಹಾದೇವಿ ಬುರ್ಲಿ, ಬಿ.ಆರ್. ಬನಸೋಡೆ ವಚನಗೀತೆ ಹಾಡಿದರು. ಕಾರ್ಯಕ್ರಮದಲ್ಲಿ ಡಾ. ವಿ.ಡಿ. ಐಹೊಳ್ಳಿ, ಮಹಾದೇವ ಹಾಲಳ್ಳಿ,ಎಸ್.ಎಸ್. ಪಾಟಿಲ,ಅಪ್ಪಾಸಾಹೇಬ ಕೋರಿ, ಜಂಬುನಾಥ ಕಂಚ್ಯಾಣಿ, ಈರಣ್ಣ ತೊಂಡಿಕಟ್ಟಿ, ಸುಭಾಸ ಯಾದವಾಡ, ಜಗದೀಶ ಮೋಟಗಿ, ಮಲ್ಲಿಕಾರ್ಜುನ ಅಮರಣ್ಣವರ ಉಪಸ್ಥಿತರಿದ್ದರು.

ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಬಿ.ಟಿ. ಈಶ್ವರಗೊಂಡ ಸ್ವಾಗತಿಸಿದರು. ಉಪಾಧ್ಯಕ್ಷ ಸಹದೇವ ನಾಡಗೌಡರ ವಂದಿಸಿದರು. ಸಾಹಿತಿ ಸಂಗಮೇಶ ಬದಾಮಿ ಕಾರ್ಯಕ್ರಮ ನಿರ್ವಹಿಸಿದರು. ಶರಣರು, ಶರಣೆಯರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಪ್ರಿಯಾಂಕ ಖರ್ಗೆ ಜೀವಬೆದರಿಕೆ ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಿ 'ದಲಿತ ಸಂಘಟನೆಗಳ ಮುಖಂಡರ ಆಗ್ರಹ

ಜೇವರ್ಗಿ:ಅ.23:'ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ದೂರವಾಣಿ ಮೂಲಕ ಜೀವ ಬೆದರಿಕೆ ಹಾಕಿದ ಆರೋಪಿಗೆ ಕಠಿಣ ಶಿಕ್ಷೆಗೆ ಒಳಪಡಿಸಿ ದೇಶದಿಂದ ಗಡಿಪಾರು ಮಾಡಬೇಕು' ಎಂದು ಒತ್ತಾಯಿಸಿ ಸೋಮವಾರ ದಲಿತ ಸಂಘಟನೆಗಳ ಸಮನ್ವಯ ಸಮಿತಿ ತಾಲ್ಲೂಕು ಘಟಕದ ವತಿಯಿಂದ ಪಟ್ಟಣದ ತಹಶಿಲ್ದಾರ್ ಕಚೇರಿಯ ಎದುರು ಪ್ರತಿಭಟನೆ ನಡೆಸಲಾಯಿತು.

'ದೇಶದಲ್ಲಿ ಕೋಮುವಾದ, ವಿಷಬೀಜ ಬಿತ್ತುತ್ತಿರುವ ಆರ್‌ಎಸ್‌ಎಸ್ ಸಂಘಟನೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಪ್ರಿಯಾಂಕ್ ಅವರಿಗೆ ಸರ್ಕಾರದ ವತಿಯಿಂದ ಝಡ್ ಶ್ರೇಣಿ ಭದ್ರತೆ ಒದಗಿಸಬೇಕು. ಸಚಿವರಿಗೆ ಅವರ ಕುಟುಂಬಕ್ಕೆ ಪದೇ ಪದೇ ಮಾನಸಿಕ

ಹಿಂಸೆ, ಬೆದರಿಕೆ ಹಾಕುವವರ ಮೇಲೆ ಸ್ವಯಂ ಪ್ರೇರಿತ (ಸುಮೋಟೋ) ಪ್ರಕರಣ ದಾಖಲು ಮಾಡಬೇಕು' ಎಂದರು.'ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ದಲಿತ ಬಾಲಕಿ ಮೇಲೆ ಹಾಗೂ ಮೈಸೂರಿನ ದಸರಾ ವೇಳೆ ನಡೆದ ಕಲಬುರಗಿ ಜಿಲ್ಲೆಯ ಬಾಲಕಿ ಅತ್ಯಾಚಾರ ಆರೋಪಿಗಳನ್ನು ತಕ್ಷಣ ಬಂಧಿಸಿ ಗಲ್ಲು ಶಿಕ್ಷೆಗೆ ಒಳಪಡಿಸಬೇಕು' ಎಂದು ಪ್ರತಿಭಟನಾ–ಕಾರರು ಆಗ್ರಹಿಸಿದರು.

ನಂತರ ತಹಶೀಲ್ದಾರ್ ಮಲ್ಲಣ್ಣ ಯಲಗೋಡ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಜಿಪಂ ಮಾಜಿ ಸದಸ್ಯ ಚಂದ್ರಶೇಖರ ಹರನಾಳ, ಶಾಂತಪ್ಪ ಕೂಡಲಗಿ, ದಲಿತ ಮುಖಂಡರಾದ ಭೀಮರಾಯ ನಗನೂರ, ಮಲ್ಲಣ್ಣ ಕೊಡಚಿ, ಪುಂಡಲೀಕ ಗಾಯಕವಾಡ, ಭಾರತ ಸರ್ಕಾರ ನೋಟರಿ ತಾಲೂಕು ವಕೀಲರ ಸಂಘದ ಪ್ರ ಕಾ ರಾಜಶೇಖರ ಶಿಲ್ಪಿ, ಅನ್ನ ದಾಸೋಹ ಮಾಡಿದರು.ಪಟ್ಟಣದ ತಹಶೀಲ್ದಾರ್ ಕಚೇರಿಯ ಎದುರು ದಲಿತ ಸಂಘಟನೆಗಳ ಸಮನ್ವಯ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು ದಲಿತ ಮುಖಂಡರಾದ ಸಿದ್ರಾಮ ಕಟ್ಟಿ,ಪಿ ಎಲ್ ಡಿ ಬ್ಯಾಂಕ ಅಧ್ಯಕ್ಷ ಪ್ರತಾಪ ಕಟ್ಟಿ, ಸುರೇಶ ಹಾದಿಮನಿ, ಗುರುರಾಜ ಸುಬೇದಾರ, ನಿಜಲಿಂಗ ದೊಡ್ಡಮನಿ, ಅಶೋಕ ದೊಡ್ಡಮನಿ, ದವಲಪ್ಪ ಮದನ್, ಸುನೀಲ ಚನ್ನೂರ, ಶ್ರೀಹರಿ ಕರಕಿಹಳ್ಳಿ, ರವಿ ಕುರಳಗೇರ, ಶಾಂತಪ್ಪ ಯಲಗೋಡ, ಮೋಹಿಯುದ್ದೀನ್ ಇನಾಮದಾರ, ಮಲ್ಲಮ್ಮ ಕೊಬ್ಬುನ ಪುರಸಭೆ ಸದಸ್ಯ ರಾಯಪ್ಪ ಬಾರಿ ಗೀಡ ಶ್ರೀಮಂತ ಧನ್ನಕರ ಹಯ್ಯಾಳಪ್ಪ ಗಂಗಾಕರ, ಬೆಣ್ಣೆಪ್ಪ ಕೊಂಬಿನ್, ಮಹೇಶ ಕೋಕಿಲೆ, ಪ್ರಭಾಕರ ಸಾಗರ, ಶಿವಲಿಂಗ ರಾಸಣಗಿ, ಭೀಮರಾಯ ಖಾದ್ಯಾಪೂರ, ಸಂತೋಷ ಜೈನಾಪೂರ, ರಾಮನಾಥ ಭಂಡಾರಿ, ಸಿದ್ದು ಕೆರೂರ, ಮಲ್ಲಿಕಾರ್ಜುನ ಕೆಲ್ಲೂರ ಸೇರಿದಂತೆ ಹಲವಾರು ಮಾತನಾಡಿದವರು ಗ್ರಾಮೀಣಾಭಿವೃದ್ಧಿ ಹಾಗೂ

ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ದೂರವಾಣಿ ಮೂಲಕ ಜೀವ ಬೆದರಿಕೆ ಹಾಕಿದ ಆರೋಪಿಗೆ ಕಠಿಣ ಶಿಕ್ಷೆಗೆ ಒಳಪಡಿಸಿ ದೇಶದಿಂದ ಗಡಿಪಾರು ಮಾಡಬೇಕು'

ದೇಶದಲ್ಲಿ ಕೋಮುವಾದ, ವಿಷಬೀಜ ಬಿತ್ತುತ್ತಿರುವ ಆರ್‌ಎಸ್‌ಎಸ್ ಸಂಘಟನೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಪ್ರಿಯಾಂಕ್ ಅವರಿಗೆ ಸರ್ಕಾರದ ವತಿಯಿಂದ ಝಡ್ ಶ್ರೇಣಿ ಭದ್ರತೆ ಒದಗಿಸಬೇಕು.





# ವಾಲ್ಮೀಕಿ ತತ್ವಾದರ್ಶಗಳು ನಮಗೆಲ್ಲ ಪ್ರೇರಣೆ:ಡಾ.ಮಾಧವ ಗುಡಿ



ವಿಜಯಪುರ:ಅ.23: ಭಾರತದ ಎರಡು ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತ ಇಡೀ ವಿಶ್ವಕ್ಕೆ ಶ್ರೇಷ್ಠ ಸಂದೇಶ ನೀಡುವ ಮೂಲಕ ಮಾದರಿಯಾಗಿ ನಿಂತಿವೆ. ನಿಸರ್ಗದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ವಾಲ್ಮೀಕಿಯವರಲ್ಲಿ ಕವಿತ್ವ ಭಾವನೆಯಿತ್ತು. ರಾಮಾಯಣ ಎಂಬ ಮಹಾಕಾವ್ಯವು ಅವರ ಕವಿತ್ವಕ್ಕೆ ಸಾಕ್ಷಿಯಾಗಿ ನಿಂತ,

ಭಾರತೀಯರು ಹೆಮ್ಮೆಪಡುವ ಶ್ರೇಷ್ಠ ಕೃತಿಯಾಗಿ ಹೊರಹೊಮ್ಮಿದೆ. ಮಾನವೀಯ ಮೌಲ್ಯಗಳು, ಪ್ರಜಾಸತ್ತಾತ್ಮಕ ರಾಜನೀತಿ ಅಂಶಗಳು, ಸಹೋದರತೆಯ ಭಾವನೆಯನ್ನು ಈ ಕಾವ್ಯ ನಮಗೆಲ್ಲ ಪರಿಚಯಿಸಿದೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ಆದಿ ಕವಿ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು ರಾಮಾಯಣ ಮಹಾಕಾವ್ಯದಲ್ಲಿ ಅವರು ನೀಡಿದ ಸಂದೇಶಗಳು ನಮಗೆಲ್ಲ ಮಾದರಿಯಾಗಿದ್ದು, ಅವುಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡೋಣ ಎಂದರು.

ಮುಖ್ಯ ಅತಿಥಿಗಳಾದ ಕಸಾಪ ಗೌರವ ಕೋಶಾಧ್ಯಕ್ಷ ಅಭಿಷೇಕ ಚಕ್ರವರ್ತಿ ಮಾತನಾಡಿ ಲವ– ಕುಶರಿಗೆ ಗುರುವಾಗಿದ್ದ ವಾಲ್ಮೀಕಿ ರಾಮಾಯಣ ಎಂಬ ಮಹಾಕಾವ್ಯದ ಮೂಲಕ ಬಹು ದೊಡ್ಡ ಸಂದೇಶ ನೀಡಿ ಹೋಗಿದ್ದಾರೆ. ಅದರಲ್ಲಿನ ತತ್ವಾದರ್ಶಗಳು ಇಂದು ಆದರ್ಶ ಸಮಾಜ ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ಕಸಾಪ ನಗರ ಘಟಕದ ಗೌರವ ಅಧ್ಯಕ್ಷೆ ಜಯಶ್ರೀ ಹಿರೇಮಠ,ನಗರ ಘಟಕದ ಅಧ್ಯಕ್ಷ ಜಗದೀಶ ಬೋಳಸೂರ ವೇದಿಕೆಯಲ್ಲಿ ಉಪಸ್ಥಿತರಿದ್ದು ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಮಾತನಾಡಿ ವಾಲ್ಮೀಕಿ ಕೇವಲ ಒಂದು ಸಮಾಜಕ್ಕೆ ಸೀಮಿತರಾದವರಲ್ಲ ಬದಲಾಗಿ ಅವರು ಇಡೀ ನಾಡಿಗೆ ಸೇರಿದವರು ಎಂದರು.

ಕಾರ್ಯಕ್ರಮದಲ್ಲಿ ಪದಾಧಿಕಾರಿಗಳಾದ ಅರ್ಜುನ ಶಿರೂರ, ಕಮಲಾ ಮುರಾಳ, ಸುಖದೇವಿ ಅಲಬಾಳಮಠ, ಜಿ.ಎಸ್. ಬಳ್ಳೂರ,

ಶಾಂತಾ ವಿಭೂತಿ, ಡಾ. ಸಂಗಮೇಶ ಮೇತ್ರಿ, ರವಿ ಕಿತ್ತೂರ, ಸಿದ್ದು ಮಾನೆ, ತೇಜಸ್ವಿನಿ ವಾಂಗಿ, ಉದಯ ಕುಮಾರ ವಾಂಗಿ, ಧರು ಕಿಲಾರಿ, ಅಶೋಕ ಸಿರಗುಪ್ಪಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ನ. 1 ರಂದು ಸಂಭ್ರಮದ ರಾಜ್ಯೋತ್ಸವ ಆಚರಣೆಗೆ ನಿರ್ಧಾರ:ಬಿ.ಫೌಜಿಯಾ ತರನ್ನುಮ್

ಕಲಬುರಗಿ,ಅ.23: ನವೆಂಬರ್ 1 ರಂದು ಜಿಲ್ಲೆಯಾದ್ಯಂತ ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯನ್ನು ಸಡಗರ ಸಂಭ್ರಮದಿಂದ ಆಚರಿಸಲು ಡಿ.ಸಿ ಬಿ. ಫೌಜಿಯಾ ತರನ್ನುಮ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.ಗುರುವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಅಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಅಂದು ನಗರೇಶ್ವರ ಶಾಲೆ ಅವರಣದಲ್ಲಿ ಬೆಳಿಗ್ಗೆ 9 ಗಂಟೆಗೆ ತಾಯಿ ಭುವನೇಶ್ವರಿ ಪೂಜೆ ಸಲ್ಲಿಸಿದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರು ರಾಷ್ಟ್ರಧ್ವಜಾರೋಹಣ ನೆರವೇರಿಸಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುವರು ಎಂದರು.

ಕಾರ್ಯಕ್ರಮಕ್ಕೆ ಶಿಷ್ಟಾಚಾರದಂತೆ ಜಿಲ್ಲೆಯ ಎಲ್ಲಾ ಚುನಾಯಿತ ಜನಪ್ರತಿನಿಧಿಗಳಿಗೆ ಆಹ್ವಾನ ನೀಡಬೇಕು. ಕಾರ್ಯಕ್ರಮ ಸ್ಥಳದಲ್ಲಿ ಸ್ವಚ್ಛತೆ ಕಾಪಾಡಬೇಕು. ಸಾರ್ವಜನಿಕರಿ,ಮಕ್ಕಳಿಗೆ ಆಸನದ ವ್ಯವಸ್ಥೆ ಜೊತೆಗೆ ನೆರಳಿನ ವ್ಯವಸ್ಥೆ ಮಾಡಬೇಕು. ವಿದ್ಯುತ್ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು. ಸಾರ್ವಜನಿಕರಿಗೆ ವೇದಿಕೆ ಬಳಿ ಹಾಗೂ ಮೆರವಣಿಗೆಯುದ್ದಕ್ಕೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಶಾಲಾ ಮಕ್ಕಳು, ಗಣ್ಯರು ಆಗಮಿಸುವುದರಿಂದ ಸೂಕ್ತ ಪೊಲೀಸ್ ಭದ್ರತೆ ಒದಗಿಸಬೇಕೆಂದು ಅಧಿಕಾರಿಗಳಿಗೆ ಡಿ.ಸಿ. ಸೂಚಿಸಿದರು.

ನಗರೇಶ್ವರ ಶಾಲೆಯಿಂದ ಡಿ.ಸಿ. ಕಚೇರಿ ವರೆಗೆ ಸಾಗುವ ಸ್ಥಬ್ದಚಿತ್ರಗಳ ಮೆರವಣಿಗೆಗೆ ನಾಡು ನುಡಿ ಕುರಿತು ಬೆಳಕು ಚೆಲ್ಲುವ ವಿಷಯವನ್ನಾಧರಿಸಿ ವಿವಿಧ ಇಲಾಖೆಯಿಂದ ಟ್ಯಾಬ್ಲೋ ಸಿದ್ಧಪಡಿಸಬೇಕು. ಮೆರವಣಿಗೆಯುದ್ದಕ್ಕೂ ಪ್ರತಿ ಟ್ಯಾಬ್ಲೋ ಮುಂದೆ ಕಲಾ ತಂಡಗಳನ್ನು ನಿಯೋಜಿಸಬೇಕು ಎಂದರು.

ವೇದಿಕೆ ಕಾರ್ಯಕ್ರಮದಲ್ಲಿ ಯಾವುದೇ ಸರ್ಕಾರಿ ಸೌಲಭ್ಯ ವಿತರಣೆ ಮಾಡುವುದಿದ್ದರೆ, ಅಧಿಕಾರಿಗಳು ಇಂದೇ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಬೇಕು. ಕೊನೆ ಕ್ಷಣದಲ್ಲಿ ಕಾರ್ಯಕ್ರಮ ಪಟ್ಟಿಗೆ ಸೇರಿಸುವುದು ಕಷ್ಟವಾಗುತ್ತದೆ. ಇನ್ನು ರಾಜ್ಯೋತ್ಸವ ದಿನಾಚರಣೆ ಯಶಸ್ಸಿಗೆ ವಿವಿಧ ಸಮಿತಿಗಳನ್ನು ರಚಿಸಿದ್ದು, ಅಧಿಕಾರಿಗಳು ತಮಗೆ ವಹಿಸಿದ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದರು.

ಸಭೆಯಲ್ಲಿ ಡಿ.ಸಿ.ಪಿ ಕನಿಕಾ ಸಿಕ್ರಿವಾಲ್ , ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.



# ನರ್ಸಿಂಗ ವಿದ್ಯಾರ್ಥಿಗಳು ಪ್ರತಿಜ್ಞಾ ವಿಧಿ ಪಾಲಿಸಬೇಕು;ಡಾ.ವಿರೇಶ ಪಾಟೀಲ



ಕಲಬುರಗಿ ;ಅ.23: ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ಪ್ರತಿಜ್ಞಾ ವಿಧಿಯನ್ನು ಪಾಲಿಸಬೇಕು ಮತ್ತು ರೋಗಿಗಳ ಕಾಳಜಿಯನ್ನು ಮಾಡಬೇಕು ಎಂದು ಮೆಡಿಕಲ್ ಸೂಪರಿಂಟೆಂಡೆಂಟ್ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯೋ ಸೈನ್ಸಸ್ ಮತ್ತು ರೀಸರ್ಚ್ ಜಯದೇವ ಆಸ್ಪತ್ರೆ ಡಾ. ವಿರೇಶ್ ಪಾಟೀಲ ಹೇಳಿದರು.

ನಗರದ ಶ್ರೀ ಗೋಪಾಲದೇವ ಜಾಧವ್ ಅವರ ನರ್ಸಿಂಗ್ ಕಾಲೇಜಿನ 4ಣು ಬ್ಯಾಚ್ ಕಾಲೇಜಿನ ಮ್ಯಾಗಜಿನ್ ಹಾಗೂ ಗ್ರೂಪ್ ರಿಸರ್ಚ್ ಪ್ರಾಜೆಕ್ಟ್ ರಿಲೀಸ್ ಮತ್ತು 1ಣ ಬ್ಯಾಚಿನ ಬೀಳ್ಕೊಡುವ ಸಮಾರಂಭ ಉದ್ಘಾಟಿಸಿ ಮಾತನಾಡಿ,ಪ್ರತಿಯೊಂದು ಸರಕಾರಿ ಅಥವಾ ಖಾಸಗಿ ಆಸ್ಪತ್ರೆಯಲ್ಲಿ ನರ್ಸಗಳ ಸೇವೆ ಬಹಳ ಮುಖ್ಯ ಪಾತ್ರವಹಿಸುತ್ತಾರೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ ಯುನೈಟೆಡ್ ಆಸ್ಪತ್ರೆಯ ಡಾ. ಶೇಕ್ ಅಹ್ಮದ ಅಲಿ ಮಾತನಾಡಿ, ನರ್ಸಸ್ ಪಾತ್ರ ವೈದ್ಯರಿಗಂತ ಹೆಚ್ಚಾಗಿ ಇರುತ್ತೆ . ಯಾಕಂದರೆ, ದಿನದ 24 ಗಂಟೆ ರೋಗಿಗಳ ಆರೈಕೆ ಮಾಡುತ್ತಾರೆ ಎಂದು ತಿಳಿಸಿದರು.

ಕಾಲೇಜಿನ ಖಜಾಂಚಿ ಡಾ. ರಾಮಚಂದ್ರ ಜಾಧವ್ ಮಾತನಾಡಿ, ನರ್ಸ್ ಗಳು ಕರುಣೆ ಮತ್ತು ಶ್ರದ್ಧೆಯಿಂದ ಕಾರ್ಯ ನಿರ್ವಹಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಪ್ರೋಫೆಸರ್ ವಿಜಯರೆಡ್ಡಿ ಮಾತನಾಡಿ, ನರ್ಸಗಳು ಎಲ್ಲಾ ವರ್ಗದ ರೋಗಿಗಳನ್ನು ಸಮಾನತೆಯಿಂದ ಕಾಣವುದರ ಜೊತೆಗೆ ಆರೈಕೆ ಮಾಡಬೇಕು.ನಮ್ಮ ಕಾಲೇಜಿನ ಅಂತಿಮ ವರ್ಷದ ಬಿ. ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ಗ್ರೂಪ್ ರಿಸರ್ಚ್ ಪ್ರಾಜೆಕ್ಟ್ ಪೂರ್ಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ತಿಳಿಸಿದರು.

ಅಂತಿಮ ವರ್ಷದ ವಿಧ್ಯಾರ್ಥಿಗಳಾದ ನಿತೀಶ್ ಹಾಗೂ ಅನಿತಾ ಮಾತನಾಡಿ ರಿಸರ್ಚ್ ಪ್ರಾಜೆಕ್ಟ್ ಕಂಪ್ಲೀಟ್ ಮಾಡುವಲ್ಲಿ ಪ್ರೋಫೆಸರ್ ವಿಜಯರೆಡ್ಡಿ ಸರ್ ಮಾರ್ಗದರ್ಶನದಲ್ಲಿ ಪೂರ್ಣ ಗೊಳಿಸದೆವು ಮತ್ತು ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ ಈ ವರ್ಷದಲ್ಲಿ ಕಲಬುರ್ಗಿ ಜಿಲ್ಲೆಯಲಿ ಗ್ರೂಪ್ ರಿಸರ್ಚ್ ಪ್ರಾಜೆಕ್ಟ್ ಪೂರ್ಣಗೊಳಿಸಿದ ಕಾಲೇಜ್ ನಮ್ಮದಾಗಿದೆ ಎಂದು ಹೇಳಿದರು.

ಈ ಸಂಧರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಅರುಣಕುಮಾರ್ ಪವಾರ, ಅಬ್ದುಲ್ ವಹೀದ್ ಮುನಿಯರ್, ಕಾಲೇಜಿನ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ,ಬೋಧಕ ,ಬೋಧಕೇತರ ಹಾಗೂ ಪಾಲಕರು ಹಾಜರಿದ್ದು ಕಾರ್ಯಕ್ರಮ ಯಶಸ್ವಿಗೊಳಸಾಯಿತು. ಭಾಗ್ಯಶ್ರೀ ಹೂಗಾರ್ ನಿರೂಪರಿಸಿದರು, ಪೂಜಾ ವಂದನಾರ್ಪಣ ಮಾಡಿದರು.

# ಭಾರತೀಯ ಸಾಂಸ್ಕೃತಿಕ ಶ್ರೀಮಂತಿಕೆ ಬಂಜಾರರ ಕೊಡುಗೆ ಅಪಾರ

ಕಲಬುರಗಿ:ಅ.23: ಆಧುನಿಕತೆ ಭರಾಟೆಯಲ್ಲಿಯೂ ಕೂಡಾ ಬಂಜಾರ ಸಮುದಾಯದವರು ತಮ್ಮದೇ ಆದ ತಮ್ಮದೇ ಆದ ವೇಷ–ಭೂಷಣ, ಕಲೆ, ಭಾಷೆ, ಸಂಸ್ಕೃತಿ, ಪರಂಪರೆಯನ್ನು ಇಂದಿಗೂ ಕೂಡಾ ಸಂರಕ್ಷಿಸಿಕೊಂಡು ಬಂದವರು. ಯಾವುದೇ ಹಬ್ಬ, ಉತ್ಸವ, ಆಚರಣೆಗಳನ್ನು ಅತ್ಯಂತ ಭಕ್ತಿ, ಶೃದ್ಧೆಯಿಂದ ಮಾಡುವ ಮೂಲಕ ತಮ್ಮ ಮುಂದಿನ ಪೀಳಿಗೆಗೆ ವರ್ಗಾಯಿಸುವ ಮೂಲಕ ಬಂಜಾರರು ಭಾರತೀಯ ಸಾಂಸ್ಕೃತಿಕ ಶ್ರೀಮಂತಿಕೆಗೆ ಅಪಾರವಾದ ಕೊಡುಗೆಯನ್ನು ನೀಡುತ್ತಿದ್ದಾರೆ ಪೂಜ್ಯ ಬಳಿರಾಮ ಮಹಾರಾಜರು ಅಭಿಮತಪಟ್ಟರು.

ಅಫಜಲಪುರ ತಾಲೂಕಿನ ಗೊಬ್ಬೂರ ವಾಡಿಯ ತಾಂಡಾದ ಸಂತ ಸೇವಾಲಾಲ್ ಆಶ್ರಮದಲ್ಲಿ ದೀಪಾವಳಿ ಪಾಡ್ಯಮಿಯಾದ ಬುಧವಾರ ಜರುಗಿದ 'ಬಂಜಾರಾ ದೀಪಾವಳಿ ಸಂಭ್ರಮ'ದಲ್ಲಿ ಬಾಲಕಿಯರು, ಮಹಿಳೆಯರಿಂದ ಜರುಗಿದ ಗಾಯನ, ನೃತ್ಯ, ಹಾಗೂ ಕಲಬುರಗಿಯ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ ಬಂಜಾರಾ ನಾಯಕರು, ಪರಂಪರೆಯ ವಾರಸುದಾರರಿಗೆ ಏರ್ಪಡಿಸಿದ್ದ ಗೌರವ ಸತ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಆರ್ಶೀವಚನ ನೀಡಿದರು.

ಬಸವೇಶ್ವರ ಸಮಾಜ ಸೇವಾ ಬಳಗದ ಅಧ್ಯಕ್ಷ ಎಚ್.ಬಿ.ಪಾಟೀಲ ಹಾಗೂ ಸಂಶೋಧಕ–ಸಾಹಿತಿ ಮುಡಬಿ ಗುಂಡೇರಾವ ಮಾತನಾಡುತ್ತಾ, ಬಂಜಾರರು ದೇಶದ ಸಂಸ್ಕೃತಿಯ ರಾಯಭಾರಗಳಂತೆ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಪ್ರಾಚೀನ ಕಲೆ, ಸಂಸ್ಕೃತಿ, ಪರಂಪರೆ ಅಪರೂಪವಾಗಿದೆ. ಆಧುನಿಕತೆಯ ಕಲಾದಲ್ಲಿಯೂ ತಮ್ಮ ಸಂಸ್ಕೃತಿಯನ್ನು ಇಂದಿಗೂ ಕೂಡಾ ಉಳಿಸಿಕೊಂಡು ಬರುವ ಮೂಲಕ ಸಮಾಜಕ್ಕೆ ಮಾದರಿಯಾಗಿದ್ದಾರೆ. ಇಂತಹ ಅಪರೂಪದ ಪರಂಪರೆಯನ್ನು ಎಲ್ಲರಲ್ಲಿ ಜನ ಜಾಗೃತಿ ಮೂಡಿಸಬೇಕು ಎಂಬ ಉದ್ದೇಶದಿಂದ ಬಳಗವು ಕಳೆದ 8 ವರ್ಷಗಳಿಂದ ಜಿಲ್ಲೆಯ ವಿವಿಧ ತಾಂಡಾಗಳಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಮಾಜ ಸೇವಕ, ಬಂಜಾರ ಚಿಂತಕ ರವಿ ನಾಯಕ, ಲಂಬಾಣಿ ಸಮುದಾಯದ ಜನರು ದೀಪಾವಳಿಯನ್ನು 'ದವಾಳಿ' ಎಂದು ಮೂರು ದಿವಸಗಳ ಕಾಲ ಅರ್ಥಪೂರ್ಣವಾಗಿ ಆಚರಿಸುತ್ತಾರೆ. ದೇವರಿಗೆ ಹರಕೆ ತೀರಿಸುವ 'ಕಾಳಿ ಮಾಸ್', ಲಕ್ಷ್ಮೀ ಪೂಜೆ, ಹಿರಿಯರಿಗೆ ಗೌರವ ಸಲ್ಲಿಸಲಾಗುತ್ತದೆ.

ಹೆಣ್ಣುಮಕ್ಕಳು ದೀಪ ಹಚ್ಚಿಕೊಂಡು ಪ್ರತಿ ಮನೆಗೆ ತೆರಳಿ ಬೆಳಗುವ 'ಮೇರಾ', ಹೊಲಕ್ಕೆ ಹೋಗಿ ಬಗೆ–ಬಗೆಯ ಹೂವುಗಳನ್ನು ತಂದು ಸಗಣಿಯ ಮೇಲ್ಭಾಗದಲ್ಲಿ ಇಡಲಾಗುತ್ತದೆ. ಆಗಮಿಸಿದ ಅತಿಥಿಗಳಿಗೆ ಸತ್ಕರಿಸುವುದು, ಲಂಬಾಣಿ ಗೀತಗಾಯನ, ನೃತ್ಯ ಮಾಡುವುದು, ಕಳಸದ ಮೆರವಣಿಗೆ ಮಾಡ'ಲಾಗುತ್ತದೆ ಎಂದು ಮೂರು ದಿನಗಳ ಕಾಲ ಆಚರಿಸುವ ವಿವಿಧ ಪದ್ಧತಿಗಳ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಬಂಜಾರ ಪರಂಪರೆಯ ಹಿರಿಯರಾದ ಶೀತಾಬಾಯಿ, ಗುರುಬಾಯಿ, ಕಮಲಾಬಾಯಿ, ರಾಮಚಂದ್ರ ಜಾಧವ ಅವರಿಗೆ ಸತ್ಕರಿಸಿ, ಗೌರವಿಸಲಾಯಿತು. ಕಸಾಪ ಕಲಬುರಗಿ ಉತ್ತರ ವಲಯದ ಗೌರವ ಅಧ್ಯಕ್ಷ ಶಿವಯೋಗೆಪ್ಪಾ ಎಸ್.ಬಿರಾದಾರ, ಪ್ರಮುಖರಾದ ಡಾ.ಗುರುನಾಥ ಜಾಧವ, ಸಂತೋಷ ಜಾಧವ, ಮಂಜುನಾಥ ಪವಾರ, ತಾರಾಬಾಯಿ, ಸಾಣೇಬಾಯಿ, ಜೈನಾಬಾಯಿ, ಶೀಲಾಬಾಯಿ, ಪ್ರತಿಭಾ, ರುಕ್ಷಣಿಬಾಯಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.












# ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಕಾಡಿದ್ದ ಆಜಾದ್ ಹಿಂದ್ ಫೌಜ್



ಕಲಬುರಗಿ:ಅ.23:ದೇಶಕ್ಕೆ ಸ್ವಾತಂತ್ರ ನೀಡಬೇಕು ಎಂದು ಪ್ರಬಲವಾಗಿ ವಾದಿಸಿದ ನೇತಾಜಿಯವರ ನೇತೃತ್ವದ ಆಜಾದ್ ಹಿಂದ್ ಫೌಜ್, ಬ್ರಿಟಿಷರ್ ಜೊತೆ ಹೋರಾಟ ಮಾಡಿತು. ವಿದೇಶಿಗಳಲ್ಲಿ ಬಂದಿತರಾಗಿದ್ದ ಭಾರತೀಯರನ್ನು ನೇತಾಜಿಯುವರು ಒಗ್ಗೂಡಿಸಿ, ಬ್ರಿಟಿಷರ ವಿರುದ್ಧ ಹೋರಾಡಲು ಪ್ರೇರಣೆ ನೀಡಿದರು. ದೇಶದ ಸ್ವಾತಂತ್ರಕ್ಕಾಗಿ ನೇತಾಜಿಯವರ ಕೊಡುಗೆ ಅಪಾರವಾಗಿದೆ ಎಂದು ಚಿಂತಕ ಡಾ.ರಾಜಶೇಖರ ಪಾಟೀಲ್ ಅಭಿಪ್ರಾಯಪಟ್ಟರು.

ನಗರದ ಆಳಂದ ರಸ್ತೆಯ ಜೆ.ಆರ್ ನಗರದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಮಂಗಳವಾರ ಸಂಜೆ ಜರುಗಿದ '83ನೇ ಆಜಾದ್ ಹಿಂದ್ ಫೌಜ್'ನ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.ಉಪನ್ಯಾಸಕ ಎಚ್.ಬಿ. ಪಾಟೀಲ್ ಮಾತನಾಡಿ, ಭಾರತದ ಮೊದಲ ತಾತ್ಕಾಲಿಕ ಸ್ವತಂತ್ರ ಸರ್ಕಾರವಾದ 'ಆಜಾದ್ ಹಿಂದ್ ಸರ್ಕಾರ' ಘೋಷಣೆಯಾದ ದಿನ ಇದಾಗಿದೆ. 1942ರಲ್ಲಿ ಮೋಹನ್ ಸಿಂಗ್ ಅವರಿಂದ ಸ್ಥಾಪಿತವಾದ 'ಆಜಾದ್ ಹಿಂದ್ ಫೌಜ್' ಅಥವಾ 'ಇಂಡಿಯನ್ ನ್ಯಾಷನಲ್ ಆರ್ಮಿ' (ಐಎನ್?ಎ) ವಿಸರ್ಜನೆಗೊಂಡ ನಂತರ ಸುಭಾಷ್ ಚಂದ್ರ ಬೋಸ್?ರಿಂದ 21 ಅಕ್ಟೋಬರ್ 1943ರಲ್ಲಿ ಮರುಸ್ಥಾಪನೆಗೊಂಡಿತು. ಜಪಾನ್, ಕ್ರೊವೇಷಿಯಾ, ಜರ್ಮನಿ, ಇಟಲಿ, ಬರ್ಮಾ ಸೇರಿದಂತೆ ಹಲವು ದೇಶಗಳು ಈ ಸರ್ಕಾರಕ್ಕೆ ಮಾನ್ಯತೆ ನೀಡಿದ್ದವು. ಸುಭಾಷ್ ಚಂದ್ರ ಬೋಸ್ ಬ್ರಿಟಿಷರೊಂದಿಗೆ ಕೆಲಸ ಮಾಡಲು ಆಸಕ್ತಿ ಹೊಂದಿರದ ಕಾರಣ, ಅವರು ಸ್ವಾತಂತ್ರ್ಯ ಚಳುವಳಿಗೆ ಸೇರಿದರು. 1944ರಲ್ಲಿ ಬ್ರಿಟಿಷ್ ಪಡೆಗಳೊಂದಿಗೆ ಕೊಹಿಮಾ ಮತ್ತು ಇಂಫಾಲ್ ಸುತ್ತಮುತ್ತ ಐಎನ್?ಎ ಯುದ್ಧ ನಡೆಸಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಜಪಾನ್ ವಿರುದ್ಧ ಬ್ರಿಟನ್ ಸೇನೆ ಕಷ್ಟಪಡುತ್ತಿತ್ತು. ನೇತಾಜಿ ಜಂಟಿ ಸೇನೆಗಳೊಂದಿಗೆ ಮುನ್ನಡೆಸಿದ ಯುದ್ಧವು, 'ಬ್ರಿಟಿಷ್ ಸೇನೆ ಭಾಗಿಯಾದ ಶ್ರೇಷ್ಠ ಯುದ್ಧಗಳಲ್ಲಿ ಒಂದು' ಎಂದು ಲಂಡನ್?ನಲ್ಲಿರುವ ರಾಷ್ಟ್ರೀಯ ಸೇನಾ ಸಂಗ್ರಹಾಲಯದ ದಾಖಲೆಗಳು ಹೇಳುತ್ತವೆ ಎಂದರು.ಕಾರ್ಯಕ್ರಮದಲ್ಲಿ ಸಮಾಜ ಸೇವಕರಾದ ಅಸ್ಲಾಂ ಶೇಖ್, ಶಿವಯೋಗೆಪ್ಪಾ ಎಸ್.ಬಿರಾದಾರ ಸೇರಿದಂತೆ ಇನ್ನಿತರರಿದ್ದರು.

# ವಾಲ್ಮೀಕಿ ಸಮಾಜ ಅವಮಾನಿಸಿದ ರಮೇಶ ಕತ್ತಿ ವಿರುದ್ಧ ಕಾನೂನು ಕ್ರಮಕ್ಕೆ ಭೀಮರಾಯ ದೊರೆ ಆಗ್ರಹ

ಚಿತ್ತಾಪುರ;ಅ.23: ಮಹರ್ಷಿ ವಾಲ್ಮೀಕಿ ಸಮಾಜವನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಅವಮಾನಿಸಿದ ಮಾಜಿ ಸಂಸದ ರಮೇಶ ಕತ್ತಿ ಅವರ ವಿರುದ್ಧ ದಲಿತ ದೌರ್ಜನ್ಯ ತಡೆ ಕಾನೂನಿನಡಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ತಾಲೂಕು ಶ್ರೀ ಮಹರ್ಷಿ ವಾಲ್ಮೀಕಿ ಸಮಾಜ ನೇತೃತ್ವದಲ್ಲಿ ತಹಶೀಲ್ ಕಚೇರಿಯ ಎದುರು ಪ್ರತಿಭಟಿಸಿದ ಮುಖಂಡರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹಮಂತ್ರಿ ಜಿ.ಪರಮೇಶ್ವರ ಅವರಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್ ಅವರಿಗೆ ಸಲ್ಲಿಸಿದರು.

ನಂತರ ತಾಲೂಕು ಅಧ್ಯಕ್ಷ ಭೀಮರಾಯ ದೊರೆ ಮಾತನಾಡಿ, ಅ. 19 ರಂದು ಬಿಎಕೆ ಮಾಡೇಲ್ ಹೈಸ್ಕೂಲ್ ಮೈದಾನದಲ್ಲಿ ಡಿ.ಸಿ.ಸಿ ಬ್ಯಾಂಕಿನ ಚುನಾವಣಾ ಮತದಾನ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ ಡಿ.ಸಿ.ಸಿ ಬ್ಯಾಂಕಿನ ಮಾಜಿ ಅಧ್ಯಕ್ಷ ಬೆಲ್ಲದ ಬಾಗೇವಾಡಿಯ ರಮೇಶ ವಿಶ್ವನಾಥ ಕತ್ತಿ ವಾಲ್ಮೀಕಿ ಸಮುದಾಯದವರನ್ನು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿ ಅಮಾನಿಸಿದ್ದರಿಂದ ರಾಜ್ಯಾದ್ಯಂತ 75 ಲಕ್ಷ ವಾಲ್ಮೀಕ ಸಮುದಾಯದ ಮನಸ್ಸಿಗೆ ತೀವ್ರ ಘಾಸಿ ಆಗಿದೆ. ಮೇಲಾಗಿ ನಮ್ಮ ಭಾವನೆಗಳಿಗೆ ದಕ್ಕೆ ಆಗಿರುವುದಲ್ಲದೆ ತೀವ್ರ ಆಘಾತವಾಗಿದೆ ಎಂದು ಹೇಳಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುವ ಸಂಭವವಿದೆ. ಈಗಾಗಲೇ ರಮೇಶ ಕತ್ತಿ ಹುಕ್ಕೇರಿ ವಿದ್ಯುತ್ ಮಂಡಳಿ ಚುನಾವಣೆಯಲ್ಲಿ ಕಳೆದ ಮೂರು ಬಾರಿ ಸತತವಾಗಿ ವಾಲ್ಮೀಕಿ ಸಮುದಾಯಕ್ಕೆ ಅವಹೇಳನಕಾರಿಯಾಗಿ ಬಿಂಬಿಸುವ ಕೆಲಸ ಸತತವಾಗಿ ಮಾಡಿರುತ್ತಾನೆ. ಅದಲ್ಲದೆ ಈಗಾಗಲೇ ಈತ ಸತತವಾಗಿ ಕೆಳ ಸಮುದಾಯಗಳ ಭಾವನೆಗಳಿಗೆ ಘಾಸಿ ಉಂಟು ಮಾಡಿರುತ್ತಾರೆ. ಕಾರಣ ದಲಿತ ಸಮುದಾಯದ ಭಾವನಗಳಿಗೆ ದಕ್ಕೆ ತಂದಿರುವ ಈತನ ಮೇಲೆ ದೌರ್ಜನ್ಯ ತಡೆ ಕಾಯ್ದೆ ಪ್ರಕರಣ ದಾಖಲಿಸಿ ಕೂಡಲೇ ಬಂಧಿಸಿ ಗಡಿಪಾರು ಮಾಡಬೇಕೆಂದು ಒತ್ತಾಯಿಸಿದರು.

ಯುವ ಅಧ್ಯಕ್ಷ ರಾಜು ದೊರೆ, ಮುಖಂಡರಾದ ಭೀಮರಾವ್ ದೊರೆ, ಮಹಾದೇವಪ್ಪ ಚೂರಿ, ಸಂಜಯ ಬುಳಕರ್,ಸಾಬಣ್ಣ ಮುಸಲಾ, ಭಾಗಪ್ಪ ದೊರೆ ಮೊಗಲಾ, ಭಾಗಪ್ಪ ನಾಯ್ಕೋಡಿ, ಸಾಬಣ್ಣ ಕುಂಬಾರಹಳ್ಳಿ, ಚಂದ್ರಕಾಂತ ದೊರೆ ಮೊಗಲಾ, ಈರಣ್ಣ ದೊರೆ, ಹಣಮಂತ ಗಿಲಗಿನ್, ತಾಯಪ್ಪ ದೊರೆ, ಚಂದ್ರು ನಾಯ್ಕೋಡಿ, ಮೊನಪ್ಪ ದೊರೆ, ರಾಯಪ್ಪ ದೊರೆ, ರಮೇಶ್ ಕೋರವಾರ, ದೇವಿಂದ್ರಪ್ಪ ನಾಯಕ, ಶಿವಶರಣಪ್ಪ ಸುಬೇದಾರ್, ವಿಶಾಲ್ ನಾಯಕ ಸೇರಿದಂತೆ ಇತತರು ಇದ್ದರು.ನಂತರ ಆರಕ್ಷಕ ಉಪನಿರೀಕ್ಷಕರಿಗೆ ಮನವಿ ಸಲ್ಲಿಸಿದರು.




# ಸಮೃದ್ಧ ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ದೊಡ್ಡದು

ಆಳಂದ:ಅ.23:ಸಮರ್ಥ ಮತ್ತು ಸಮೃದ್ಧಿ ರಾಷ್ಟ್ರ ನಿರ್ಮಾಣವಾಗಬೇಕಾದರೆ ಶಿಕ್ಷಕರು ವಿದ್ಯಾರ್ಥಿಗಳಿಗೆ ನೀಡಿರುವ ಗುಣಮಟ್ಟದ ಶಿಕ್ಷಣದಿಂದ ಮಾತ್ರ ಸಾಧ್ಯ. ಹೀಗಾಗಿ ದೇಶ ನಿರ್ಮಾಣ ಕಾರ್ಯದಲ್ಲಿ ಶಿಕ್ಷಕರು ಮಾಡುತ್ತಿರುವ ಬೋಧನೆ ಬಹು ದೊಡ್ಡದು ಎಂದು ಯಳಸಂಗಿ ಗ್ರಾಮದ ಶ್ರೀ ಸಿದ್ದಾರೂಢ ಮಠದ ಪರಮಾನಂದ ಸ್ವಾಮಿಜಿ ಹೇಳಿದರು.



ತಾಲೂಕಿನ ಮಾಡಿಯಾಳ ಗ್ರಾಮದ ಶ್ರೀ ಚನ್ನಮಲ್ಲೇಶ್ವರ ಮಠದ ಆವರಣದಲ್ಲಿ ಭಾನುವಾರ ನಡೆದ ಗುರುವಂದನಾ ಮತ್ತು ಸ್ನೇಹ ಸಮ್ಮಿಲನ ಕಾರ್ಯಕ್ರಮದ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.ಇತ್ತಿಚೀನ ದಿನಗಳಲ್ಲಿ ವಿದ್ಯಾವಂತ ಯುವಕರು ತಮಗೆ ಜನ್ಮ ನೀಡಿದ ತಂದೆ ತಾಯಿಗಳನ್ನು ಅನಾಥಶ್ರಮದಲ್ಲಿ ಬಿಡುವುದು ಮತ್ತು ನಡು ಬಿದಿಯಲ್ಲಿ ತಳ್ಳುತ್ತಿರುವುದು ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಇದರಿಂದ ಶಿಕ್ಷಕ ಅಕ್ಷರ ಕಲಿಸಿದರೆ ಹೆತ್ತ ಪಾಲಕರು ಜನ್ಮ ನೀಡಿ ನಿಮಗೆ ಕಷ್ಟಪಟ್ಟು ಉನ್ನತ ಸ್ಥಾನಕ್ಕೆ ತಲುಪಿಸುವ ಪಾಲಕರಿಗೂ ಮೊದಲ ಗೌರವ ನೀಡಿ ಅವರನ್ನು ಜೋಪಾನವಾಗಿ ಕಾಪಾಡುವ ಜವಾಬ್ದಾರಿ ನಿಮ್ಮ ಮೇಲೆ ಇದೆ ಎಂದು ಸ್ವಾಮಿಜಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ವಪ್ಪತ್ತೇಶ್ವರ ಮಠದ ಮರುಳಸಿದ್ದ ಸ್ವಾಮಿಜಿ ಮಾತನಾಡಿ, ಇಂದು 27 ವರ್ಷಗಳ ಹಿಂದೆ ತಮ್ಮಗೆ ವಿದ್ಯೆ ನೀಡಿ ನೀವೃತ್ತಿ ಜೀವನ ನಡೆಸುತ್ತಿರುವ ಎಲ್ಲಾ ಶಿಕ್ಷಕರನ್ನು ಒಂದೆಕಡೆ ಸೇರಿಸಿ ಅವರನ್ನು ಗ್ರಾಮದಲ್ಲಿ ಮೆರವಣಿಗೆ ಮಾಡಿ ಸನ್ಮಾನಿಸಿದ ಇಡಿ ವಿದ್ಯಾರ್ಥಿಗಳ ಕಾರ್ಯ ಎಲ್ಲರಿಗೂ ಮಾದರಿಯಾಗಿದೆ ಎಂದು ಹೇಳಿದರು.

ನೀವೃತ್ತ ಶಿಕ್ಷಕರಾದ ಗುರುನಾಥ ಶಿವಪುರೇ, ಶ್ರೀಶೈಲ ಹೀರೆಮಠ ಸನ್ಮಾನ ಸ್ವೀಕರಿಸಿ ಮಾತನಾಡಿ, ಮೂಲೆ ಮೂಲೆಯಲ್ಲಿರುವ ನಮ್ಮನ್ನು ಕರೆದು ಗ್ರಾಮದಲ್ಲಿ ಮೆರವಣಿಗೆ ಮಾಡಿ, ಸನ್ಮಾನಿಸಿ ಗೌರವಿಸಿದ್ದಾರೆ. ಇದು ನಮ್ಮಗೆ ನೋಬಲ್ ಪ್ರಶಸ್ತಿಕೊಟಂತಾಗಿದೆ ಎಂದರು. ಗೌಡಪ್ಪ ಬಿರಾದಾರ ಪ್ರಾಸ್ತಾವಿಕ ಮಾತನಾಡಿದರು.

ಶ್ರೀ ಸೋಮಶೇಖರ ವಡಿಯರ, ಶ್ರೀ ಪ್ರಭುರಾಯ ಪೂಜಾರಿ, ಶ್ರೀ ಅವಧೂತಪ್ಪ ಪೂಜಾರಿ, ಸಿದ್ರಾಮಪ್ಪ ಸೋಲಾಪುರ, ದೊಂಡಿಬಾ ಜಾಧವ, ಬಿ.ಎಸ್. ಪಾಟೀಲ್, ಬಸವರಾಜ ಮಠ, ಗುರುಲಿಂಗಪ್ಪ ಬಿರಾದಾರ, ಸಿದ್ದರೂಢ ನಿಂಬಾಳ, ಗಣಪತಿ ಚವ್ಹಾಣ್, ರಾಮಚಂದ್ರ ರಾಠೋಡ, ಸಂಪತಕುಮಾರ ಕಲ್ಲಶೇಟ್ಟಿ, ಸಂಜಯಕುಮಾರ ಶ್ರೀಗಣಿ, ಸಿದ್ದರಾಮ ಆಳಂದ, ಬಸವರಾಜ ನಾಶಿ, ಮಲ್ಲಿನಾಥ ಹೊನಗುಂಡಿ, ಶಶಿಕಲಾ ಬೆಣ್ಣಿಶಿರೂರ ಶಿವಲಾಲ ರಾಠೋಡ, ಮಾಂತಪ್ಪ ಬಿರಾದಾರ, ಬೇಬಿ ರಾಠೋಡ ಅನೇಕರು ಭಾಗವಹಿಸಿದರು.

ಮಾಂತೇಶ ಮುದ್ದಡಗಿ ನಿರೂಪಿಸಿದರು. ಮಹಾನಂದ ಕಂಬಾರ ಅವರ ಸಂಗಡಗಿರು ಪಾರ್ಥನಾ ಗೀತೆ ಹಾಡಿದರು. ತಾಯಮ್ಮ ಕಲಶೆಟ್ಟಿ ವಂದಿಸಿದರು.

ಈ ಮುಂಚೆ ಶ್ರೀ ಶಂಕರಲಿಂಗೇಶ್ವರ ದೇವಸ್ಥಾನದಿಂದ ಚನ್ನಮಲ್ಲೇಶ್ವರ ಮಠದವರೆಗೆ ಶಿಕ್ಷಕರನ್ನು ಮೆರವಣಿಗೆ ಮಾಡುವ ಮೂಲಕ ಕೊಂಡ್ಯೊಯಲಾಯಿತು.

# ದುಃಖದ ನಡುವೆ ಬೆಳಕಿನ ಹಬ್ಬದ ಸಂಭ್ರಮ: ಆಳಂದ ತಾಲೂಕಿನಲ್ಲಿ ದೀಪಾವಳಿಯ ವೈವಿಧ್ಯಮಯ ಚೈತನ್ಯ

ಆಳಂದ:ಅ.23:ಅತಿವೃಷ್ಟಿ, ಅನಾವೃಷ್ಟಿ ಹಾಗೂ ಆರ್ಥಿಕ ಸಂಕಷ್ಟಗಳ ನಡುವೆಯೂ ಆಳಂದ ತಾಲೂಕಿನ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳು ಮೂರು ದಿನಗಳ ಕಾಲ ಬೆಳಕಿನ ಹಬ್ಬ 'ದೀಪಾವಳಿ'ಯ ಸಂಭ್ರಮದಲ್ಲಿ ಮುಳುಗಿದ್ದವು. ನರಕ ಚತುರ್ದಶಿ, ಲಕ್ಷ್ಮಿ ಪೂಜೆ ಮತ್ತು ಬಲಿಪಾಡ್ಯಮಿ ಆಚರಣೆಗಳಿಂದ ಗ್ರಾಮದ ಬೀದಿಗಳು ದೀಪಗಳ ಕಿರಣಗಳಿಂದ ಕಂಗೊಳಿಸಿದವು.

ಮಹಿಳೆಯರು ತವರು ಮನೆಗಳಲ್ಲಿ ಕುಟುಂಬ ಸದಸ್ಯರೊಂದಿಗೆ ಸೇರಿ ಸಂಪ್ರದಾಯಬದ್ಧ ಆಚರಣೆಗಳನ್ನು ನೆರವೇರಿಸಿದರು. "ದುಃಖ ಎಷ್ಟೇ??? ಇರಲಿ, ದೀಪದ ಬೆಳಕು ನಂಬಿಕೆಯ ಸಂಕೇತ" ಎಂದು ಸ್ಥಳೀಯ ಮಹಿಳೆಯರು ಹೇಳಿಕೊಂಡರು.

ದಕ್ಷಿಣ ಭಾರತದ ಪ್ರಮುಖ ಹಬ್ಬಗಳಲ್ಲಿ ಒಂದಾದ ದೀಪಾವಳಿ ಈ ಬಾರಿ ಅಕ್ಟೋಬರ್ 20ರಿಂದ 22ರವರೆಗೆ ಆಚರಿಸಲ್ಪಟ್ಟಿತು. ಆಳಂದ ಪಟ್ಟಣ, ನಿಂಬರ್ಗಾ, ಖಜೂರಿ, ನರೋಣ ಹಾಗೂ ಮಾದನಹಿಪ್ಪರಗಾದ ಗ್ರಾಮಗಳಲ್ಲಿ ಉತ್ಸವದ ಜಲ್ಸೆ ಮೂಡಿತ್ತು.ಹಬ್ಬದ ಮುನ್ನದಿನ ಮಾರುಕಟ್ಟೆಗಳಲ್ಲಿ ಪೂಜಾ ಸಾಮಗ್ರಿಗಳು, ಹೂವುಗಳು, ಹಂಪಲುಗಳು, ಹಣ್ಣುಗಳು ಮುಂತಾದವುಗಳ ಖರೀದಿ ಜೋರಾಗಿತ್ತು. "ಬೆಲೆ ಏರಿಕೆಯಿದ್ದರೂ, ಹಬ್ಬದ ಉತ್ಸಾಹ ಕಡಿಮೆಯಾಗಿಲ್ಲ" ಎಂದು ಗ್ರಾಹಕರು ಹೇಳಿದರು.

ಕುಟುಂಬ ಸಂಗಮ ಮತ್ತು ಸಂಪ್ರದಾಯದ ಸೌಂದರ್ಯ ದೀಪಾವಳಿಯ ಪ್ರಮುಖ ಅಂಶವಾದ ಕುಟುಂಬ ಸಂಗಮ ಈ ಬಾರಿ ಆಳಂದ ತಾಲೂಕಿನಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿತ್ತು. ಹೆಣ್ಣುಮಕ್ಕಳನ್ನು ತವರು ಮನೆಗೆ ಕರೆತಂದು ಅಣ್ಣ–ಸೋದರರಿಗೆ ಆರತಿ ಮಾಡುವ ದೃಶ್ಯ ಎಲ್ಲೆಡೆ ಕಂಡುಬಂತು."ಸಹೋದರರ ಬಂಧನ ಬಲಪಡಿಸುವ ದಿನ ಇದು," ಎಂದು ರೇಣುಕಾ ಪಾಟೀಲ ಹೇಳಿದರು. ಹೊಸ ಬಟ್ಟೆ ಧರಿಸಿ,ಕಾರ್ಚಿಕಾಯಿ, ಚಿವುಡಾ, ಲಾಡು, ಪಾಯಸ ಮುಂತಾದ ಸಿಹಿತಿಂಡಿಗಳನ್ನು ಸವಿದು ಹಬ್ಬದ ಉಲ್ಲಾಸವನ್ನು ಹಂಚಿಕೊಂಡರು. ಮನೆಗಳ ಬಾಗಿಲು ರಂಗೋಲಿ, ಕಬ್ಬು, ಮಾವಿನ ತೋರಣ ಹಾಗೂ ಹೂವಿನ ಅಲಂಕಾರಗಳಿಂದ ಕಂಗೊಳಿಸಿದವು.

ಪರಿಸರ ಸ್ನೇಹಿ ದೀಪಾವಳಿ ಪ್ರಚಾರ:ಪಟಾಕಿ ಸಿಡಿಸುವ ಸಂಭ್ರಮದ ನಡುವೆಯೂ ಪರಿಸರ ಸ್ನೇಹಿ ಆಚರಣೆಗಾಗಿ ಸ್ಥಳೀಯ ಆಡಳಿತದಿಂದ ಹಸಿರು ಪಟಾಕಿ ಬಳಕೆಗೆ ಕರೆ ನೀಡಲಾಯಿತು. "ಮಕ್ಕಳ ಸುರಕ್ಷತೆ ಮತ್ತು ಪರಿಸರ ಸಂರಕ್ಷಣೆಯು ನಮ್ಮ ಕರ್ತವ್ಯ," ಎಂದು ಅಧಿಕಾರಿಗಳು ತಿಳಿಸಿದರು.

ವ್ಯಾಪಾರಿಗಳ ಲಕ್ಷ್ಮಿ ಪೂಜೆ–ಆಶಾದೀಪದ ಸಂಕೇತ: ವ್ಯಾಪಾರಿಗಳಿಗೆ ದೀಪಾವಳಿ ಹೊಸ ವಾಣಿಜ್ಯ ವರ್ಷದ ಪ್ರಾರಂಭದ ಹಬ್ಬ. ಆಳಂದ ಪಟ್ಟಣದ ಅಂಗಡಿಗಳಲ್ಲಿ ಲಕ್ಷ್ಮಿ ಪೂಜೆ ಆಚರಣೆ ನಡೆಯಿತು. ಹೊಸ ಖಾತೆ ತೆರೆಯುವ ಸಂಪ್ರದಾಯದೊಂದಿಗೆ ದೇವರಿಗೆ ನೈವೇದ್ಯ ಸಮರ್ಪಿಸಲಾಯಿತು. "ಬೆಳೆ ಹಾನಿಯಿಂದ ವ್ಯವಹಾರ ಕುಂಠಿತವಾದರೂ, ದೇವಿಯ ಕೃಪೆಯಿಂದ ಚೇತರಿಕೆ ಬರುವ ವಿಶ್ವಾಸವಿದೆ," ಎಂದು ನರೋಣದ ವ್ಯಾಪಾರಿ ವಿಯಕುಮಾರ ಮೇಲ್ಕೇರಿ ಹೇಳಿದರು.

ಹೋಬಳಿ ಕೇಂದ್ರಗಳಾದ ನಿಂಬರ್ಗಾ ಮತ್ತು ಖಜೂರಿಯ ಮಾರುಕಟ್ಟೆಗಳಲ್ಲಿ ವ್ಯಾಪಾರ ಚಟುವಟಿಕೆ ಚುರುಕಾಗಿದ್ದರೂ, ಬೆಲೆ ಏರಿಕೆಯ ಹಿನ್ನೆಲೆಯಲ್ಲಿಯೂ ಜನಸಮುದಾಯದ ಹಬ್ಬದ ಉತ್ಸಾಹ ಕಡಿಮೆಯಾಗಿಲ್ಲ.








Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401